ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ಬೆಂಗಳೂರಿನ ಕೇಂದ್ರ ಕಾರಾಗೃಹವನ್ನು ಸ್ಥಳಾಂತರಿಸುವ ಬಗ್ಗೆ

189 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಕಾರಾಗೃಹಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಕೇಂದ್ರ ಕಾರಾಗೃಹವನ್ನು ಸ್ಥಳಾಂತರಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಕೈಗೊಂಡಕ್ರಮಗಳೇನು?

ಇ) ಈ ಕೇಂದ್ರ ಕಾರಾಗೃಹವನ್ನು ಯಾವಾಗ ಸ್ಥಳಾಂತರಿಸಲಾಗುವುದು?

ಶ್ರೀ ಎನ್. ಮಿರಾಜುದ್ದೀನ್ ಪಾಟೀಲ್ (ಕಾರಾಗೃಹಗಳ ರಾಜ್ಯ ಸಚಿವರು) :

ಅ) ಹೌದು.

ಆ) ಬೆಂಗಳೂರು ದಕ್ಷಿಣ ತಾಲ್ಲೂಕು ಪರಪ್ಪನ ಅಗ್ರಹಾರದಲ್ಲಿ ಕಾರಾಗೃಹದ ನಿರ್ಮಾಣ ಕ್ಕಾಗಿ 118.29 ಎಕರೆ ಜಮೀನನ್ನು ಈಗಾಗಲೇ ಸ್ವಾಧೀನ ಪಡೆದುಕೊಂಡಿದ್ದು, ಇನ್ನೂ 30.27 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ಜರುಗಿಸಲಾಗುತ್ತಿದೆ. ಕಾರಾಗೃಹದ ನಿರ್ಮಾಣ ಕಾಮ ಗಾರಿ 1979-80 ರಿಂದ ಪ್ರಾರಂಭವಾಗಿದೆ. ಹಾಗೂ ಪ್ರಗತಿಯಲ್ಲಿದ್ದು ಈಗಾಗಲೇ ಮೊದಲ ಹಂತದ ಕಾಮಗಾರಿಯಾದ ಮುಖ್ಯ ಗೋಡೆ, ಹೆದ್ದಾರಿಯಿಂದ ಕಾರಾಗೃಹದವರೆಗೆ ಅಪ್ರೋಚ್ ರಸ್ತೆ, ಅಡುಗೆ ಮನೆ ಬ್ಲಾಕ್, ಏ1 ರಿಂದ ಜಿ1ರವರೆಗೆ ಏಳು ಬ್ಯಾರಾಕುಗಳು, ಸಿಬ್ಬಂದಿ ವಸತಿಗೃಹಗಳು, ನಿರೀಕ್ಷಣಾ ಕೊಠಡಿ, ಅಂಗಡಿ ಮಳಿಗೆ ಕಟ್ಟಡಗಳ ಕಾಮಗಾರಿಯು ಪೂರ್ಣಗೊಂಡಿರುತ್ತದೆ.

ನರ್ಸರಿ ಮತ್ತು ಪ್ರಾಥಮಿಕ ಶಾಲಾ ಕಟ್ಟಡ, ಬ್ಯಾರಾಕುಗಳ ನಡುವೆ ಆವರಣ ಗೋಡೆ ನಿರ್ಮಾಣ, ಆಸ್ಪತ್ರೆ ಕಟ್ಟಡ ಬ್ಯಾರಾಕುಗಳು, ಅಡ್ಮಿನಿಸ್ಟ್ರೇಟೀವ್ ಬ್ಲಾಕ್, ಟಾಯ್ಲೆಟ್ ಮತ್ತು ಬಾತಿಂಗ್ ಫ್ಲಾಟ್‌ಫಾರಂ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಇ) ನೂತನ ಕಾರಾಗೃಹ ಕಟ್ಟಡ ನಿರ್ಮಾಣ ಪೂರ್ಣಗೊಂಡ ನಂತರ ಸ್ಥಳಾಂತರಿಸಲಾಗು ವುದು.

ಖೈದಿಗಳ ಜೀವಾವಧಿ ಶಿಕ್ಷೆಯ ಅವಧಿ ಇಳಿಸುವುದು

191 - ಶ್ರೀ ರಾಮಲಿಂಗಾರೆಡ್ಡಿ(ಜಯನಗರ) : ಮಾನ್ಯ ಕಾರಾಗೃಹಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಖೈದಿಗಳ ಸಂಖ್ಯೆ ಎಷ್ಟು?

ಆ) ತಮಿಳುನಾಡಿನಲ್ಲಿ ಜೀವಾವಧಿ ಶಿಕ್ಷೆಯ ಅವಧಿಯನ್ನು 14ವರ್ಷದಿಂದ 10 ವರ್ಷಕ್ಕೆ ಇಳಿಸಿರುವುದು ನಿಜವಲ್ಲವೆ?